**C.Misc 1949/22**
**RW-1**

**ದಿನಾಂಕಃ 12.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ಅರ್ಜಿದಾರರ ಪರ ವಕೀಲರಿಂದಃ-**

ನಾನು ಎಸ್ ಎಸ್ ಎಲ್ ಸಿ ವರೆಗೂ ಓದಿರುತ್ತೇನೆ. 1 ನೇ ಅರ್ಜಿದಾರಳು ನನ್ನ ಹೆಂಡತಿ ಮತ್ತು 2 ನೇ ಅರ್ಜಿದಾರ ನನ್ನ ಮಗ. ಮದುವೆ ಸಮಯದಲ್ಲಿ ವರದಕ್ಷಿಣೆಯಾಗಿ ಏನೇನು ಕೊಟ್ಟಿರುತ್ತಾರೆ ಎಂದರೆ ಏನೂ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ವರದಕ್ಷಿಣೆ ವಿಚಾರವಾಗಿ 1 ನೇ ಅರ್ಜಿದಾರಳು ನನ್ನ ವಿರುದ್ಧ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ 2 ದೂರು ದಾಖಲಿಸಿರುತ್ತಾರೆ ಎಂದರೆ 1 ಬಾರಿ ದೂರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅರ್ಜಿದಾರಳು ನನ್ನ ವಿರುದ್ಧ ನೀಡಿದ ದೂರಿನ ಆದಾರದ ಮೇಲೆ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲು ಆಗಿದ್ದು ಅದು ಇನ್ನೂ ಬಾಕಿ ಇದೆ ಎಂದರೆ ಸರಿ. ನನಗೆ ಸ್ವಂತ ಕಾರು ಇರುತ್ತದೆ ಎಂದರೆ ಸಾಕ್ಷಿ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಮುಂದುವರೆದು ಅಪಘಾತ ಆಗಿ ಕೈ ಗೆ ಗಾಯ ಆಗಿ ಈಗ ಕೆಲಸ ಮಾಡುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ದಾಖಲೆ ಹಾಜರುಪಡಿಸಿಲ್ಲ. ನನಗೆ ಸ್ವಂತ ಕಾರು ಇದ್ದು ದಿನಕ್ಕೆ 5-6 ಸಾವಿರ ಸಂದಾಪನೆ ಮಾಡುತ್ತೇನೆ ಎಂದರೆ ಸರಿಯಲ್ಲ. ನನಗೆ ನೇರಳೆ ಗ್ರಾಮದಲ್ಲಿ 5-6 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ. ಅದರಿಂದ ನನಗೆ ವಾರ್ಷಿಕವಾಗಿ 5-6 ಲಕ್ಷ ಹಣ ಬರುತ್ತದೆ ಎಂದರೆ ಸರಿಯಲ್ಲ. ನನಗೆ 5-6 ಲಕ್ಷ ವಾರ್ಷಕವಾಗಿ ಆದಾಯ ಇದ್ದರೂ ಅರ್ಜಿದಾರರಿಗೆ ಜೀವನಾಂಶ ಕೊಡಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ವರದಕ್ಷಿಣೆಯಾಗಿ ರೂ. 25 ಸಾವಿರ ಬೆಲೆ ದ್ವಿಚಕ್ರ ವಾಹನ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**